**ಅಸಲು ದಾವಾ ನಂಃ 24/2022**
**ಪಿ.ಡಬ್ಲ್ಯೂಃ1,**

**ದಿನಾಂಕ :19-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು: 4ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು, ಸಾಕಷ್ಟು ಕಾಲವಕಾಶ ನೀಡಿದ್ದರಿಂದ, ಪಾಟಿ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.**

**ಪಾಟಿ ಸವಾಲು :- ಶ್ರೀ ವಿ.ಎಮ್. ಎ. ಪ್ರತಿವಾದಿ ನಂ- 5 ಪರ ವಕೀಲರಿಂದ :**

ನಮ್ಮ ಅಜ್ಜ ಸಾಬಣ್ಣನಿಗೆ 4 ಜನ ಗಂಡು ಮಕ್ಕಳು, ಒಂದು ಹೆಣ್ಣು. ಕಳೆದ ಬಾರಿ ನಾನು ನನ್ನ ತಂದೆ ಮತ್ತು ನನ್ನ ಅಜ್ಜ ಕ್ರೈಸ್ತ ಧರ್ಮ ಪಾಲನೆ ಮಾಡುತ್ತಿದ್ದರು ಎಂದು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ನಾನು ಕ್ರೈಸ್ತ ಧರ್ಮ ಪಾಲನೆ ಮಾಡುತ್ತೇನೆ. ನಾನು ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಬರೆಸಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ಹಿಂದು ಜಂಟಿ ಕುಟುಂಬ ಅಂತಾ ಬರೆದಿದ್ದು ಅದನ್ನು ನಾನು ಹೇಳಿ ಬರೆಸಿಲ್ಲಾ. 4ನೇ ಪ್ರತಿವಾದಿ ಓ.ಎಸ್. ನಂ: 9/2016 ದಾವೆ ಸಲ್ಲಿಸಿದ್ದು, ಅದರಲ್ಲಿ ನನಗೆ ನೋಟಿಸ ಬಂದಿರುತ್ತದೆ ಎಂದರೆ ಸರಿಯಲ್ಲ. ನನಗೆ ಸಮನ್ಸ ಬಂದಿಲ್ಲಾ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನನಗೆ ನೋಟಿಸ ಬಂದಿತ್ತು, ನನಗೆ ತಲುಪಿಲ್ಲಾ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಪಾಲಿನಲ್ಲಿ ನನ್ನ ತಂದೆಗೆ ಯಾವ ಯಾವ ಸರ್ವೆ ನಂಬರ ಬಂದಿವೆ ಎಂದು ನನಗೆ ಗೊತ್ತಿಲ್ಲಾ, ಆದರೆ 6 ಎಕರೆ ಕಮ್ಮಿ ಇದೆ, 3 ಎಕರೆ ಕಮ್ಮಿ ಇದೆ, 1 1/2 ಎಕರೆ ಕಮ್ಮಿ ಇದೆ. ಜಮೀನುಗಳು ಬಿತ್ತಿ ಬೆಳೆಯುವಾಗ ನಾನು ಹೋಗುತ್ತಿದ್ದೆ. ಈಗಲೂ ನಾನು ಬಿತ್ತಿ ಬೆಳೆಯುತ್ತೇನೆ. ಹೊದ ವರ್ಷ ತೊಗರಿ ಮತ್ತು ಹೆಸರು ಬೆಳದಿದ್ದೇನೆ.

ಮನೆ ಇಂದ ಜಮೀನು ಎಷ್ಟು ದೂರು ಇದೆ ಎಂದು ಗೊತ್ತಿಲ್ಲಾ. ದಾವೆ ಆಸ್ತಿ ನಮ್ಮ ತಂದೆ ಆಸ್ತಿ ಮೇಲೆ ಹಾಕಿದ್ದೇನೆ. ನಮ್ಮ ತಂದೆ ಇದ್ದಾಗ ನಮ್ಮ ತಾಯಿ ಮತ್ತು ಅಣ್ಣ ಮೇಲೆ ವರ್ಗಾವಣೆ ಆಗಿದೆ ಎಂದರೆ ಸರಿಯಲ್ಲ . ನನ್ನ ತಂದೆ ತೀರಿ ಹೋಗಿ 50 ವರ್ಷಗಳು ಆಗಿವೆ. ನನ್ನ ತಂದೆ ತೀರಿ ಹೋಗಿ 50 ವರ್ಷಗಳು ಆಗಿವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ದಾವಾ ಆಸ್ತಿ 1981-82 ರಲ್ಲಿ ರಾಮಣನಿಗೆ ಬಂತು, ನಂತರ ರಾಮಣ್ಣನು 1 ಮತ್ತು 3ನೇ ಪ್ರತಿವಾದಿಗೆ ದಾವಾ ಆಸ್ತಿಗಳನ್ನು ಮಾಡಿದನು ಎಂದರೆ ಸರಿಯಲ್ಲ . ನಾನು ಯಾವಗಲೂ ದಾವಾ ಆಸ್ತಿಗೆ ಹೋಗಿ ಬರುವುದು ಮಾಡುತ್ತೇನೆ. ದಾವಾ ಆಸ್ತಿಯನ್ನು 2011-12 ರಲ್ಲಿ 1 ನೇ ಪ್ರತಿವಾದಿ ಮಾರಾಟ ಮಾಡಿದ್ದು, ಅಂದಿನಿಂದ 5 ನೇ ಪ್ರತಿವಾದಿ ಸ್ವಾಧೀನ ಮತ್ತು ಉಪಭೋಗ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ . ಸ.ನ. 58/2, 59/2 ಖರಿದಿ ಮಾಡಿದಾಗಿನಿಂದ 5ನೇ ಪ್ರತಿವಾದಿ ಅಲ್ಲಿ ಖಣಿಗಾರಿಕೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ . 2011 ರಿಂದ ನಾನಾಗಲಿ, ನನ್ನ ಕುಟುಂಬದರಾಗಲಿ ಸದರಿ ಆಸ್ತಿಗಳ ಮೇಲೆ ಯಾವುದೇ ಸ್ವಾಧೀನ ಮತ್ತು ಅನುಭವ ಇಲ್ಲಾ ಎಂದರೆ ಸರಿಯಲ್ಲ . 5ನೇ ಪ್ರತಿವಾದಿ ಕಡೆಯಿಂದ ಹೆಚ್ಚಿನ ಹಣ ಪಡೆದಯುವ ದುರದ್ದೇಶದಿಂದ ನಾನು, ಉಳಿದ ಪ್ರತಿವಾದಿಗಳು ಸೇರಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ . ಸ.ನ. 59/2 ಕ್ಕೆ ಪ್ರತಿಫಲ ರೂ.9,30,000/- ನೀಡಿದ್ದು ಮತ್ತು ಸ.ನ. 58/2 ರೂ. 34,95,000/- ಪ್ರತಿಫಲ ನೀಡಿದ್ದಾರೆ ಎಂದರೆ ಸರಿಯಲ್ಲ .

**ಅಸಲು ದಾವಾ ನಂಃ 24/2022**
**ಪಿ.ಡಬ್ಲ್ಯೂಃ1,**

ನಾನು ದಾವಾ ಆಸ್ತಿಯಲ್ಲಿ ಕಬ್ಜೆಯಲ್ಲಿದ್ದೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಜಮೀನುಗಳನ್ನು ಮಾರಾಟ ಮಾಡಿದ ಬಗ್ಗೆ ನನಗೆ 2011-12 ರಲ್ಲಿ ಗೊತ್ತಾಗಿದೆ ಎಂದರೆ ಸರಿಯಲ್ಲ . ಈ ದಾವೆ ಹಾಕುವ ಸ್ವಲ್ಪ ದಿನ ಮುಂಚೆ ದಾವಾ ಆಸ್ತಿ ಮಾರಾಟ ಮಾಡಲಾಗಿದೆ ಎಂದು ಗೊತ್ತಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**